ಶ್ರೀ ಟಿ. ಹನುಮಯ್ಯ.—ತಾವು ಹೇಳಿದ ಎಂಟು ಕಾರ್ಯಕ್ರಮಗಳೂ ಮೈನೂರಿನವರು ನಿಗದಿ ಮಾಡಿದವೋ ಅಥವಾ ಕೇಂದ್ರ ಸರ್ಕಾರದವರು ನಿಗದಿ ಮಾಡಿದವೋ?

*ಶ್ರೀ ಕೆ. ಹನುಮಂತಯ್ಯ.—ಅದು ಅವರ ಸ್ಕೀಂ.

Mr. SPEAKER.—This question has been put twice. Therefore the Hon'ble Member will only select such questions which were not put.

ಶ್ರೀ ಟಿ. ಹನುಮಯ್ಯ.—ಈ ಕಾರ್ಯಕ್ರಮವನ್ನು ಯಾವ ಸಂಸ್ಥೆಗೆ ಸೇರಿಸಿದ್ದೀರಿ?

Sri K. HANUMANTHAIYA.—The Depressed Class Commissioner.

ಶ್ರೀ ಟಿ. ಹನುವ ಯ್ಯ.—ಸಂಸ್ಕೃತಿ ಪ್ರಚಾರಕ್ಕೆ ಏನಾದರೂ ಇದನ್ನು ಪಹಿಸಿದ್ದೀರಾ?

ಶ್ರೀ ಕೆ. ಹನುಮಂತಯ್ಯ.—ಇಲ್ಲ.

---

## National Extension Service Blocks for 1955-56.

*Q.*—830. Sri T. C. BASAPPA (Tarikere).—

Will the Government be pleased to state :—

(*a*) the uumber of National Extention Blocks that will be opened in Mysore State during 1955-56 ;

(*b*) whether there is no representation from Tarikere Taluk since last two years to introduce N. E. Service scheme ;

(*c*) whether Tarikere is not contiguous to Koppa-Narasimharajapura N. E. Block and whether it is not under the same Revenue Sub-Division ;

(*d*) whether they will consider the advisability to introduce the N. E. Service Scheme to Tarikere Taluk during 1955-56 ?

*A.*—Dr. R. NAGAN GOWDA (Minister for Agriculture).—

(*a*) This Government has asked for 12 Blocks for 1955-56. Government of India have not intimated the number of blocks allotted for the year.

(*b*) There are representations from almost all the taluks to which the Scheme is not extended till now.

(*c*) Yes,

(*d*) The suggestion will be considered when allotting additional N. E. S. Blocks.

*ಶ್ರೀ ಟಿ. ಸಿ. ಬಸಪ್ಪ.—1955-56ನೆಯ ಇಸವಿಗೆ ಐದು ಬ್ಲಾಕುಗಳು ಸ್ಯಾಂಕ್ಷನ್ ಆಗಿವೆಯೆಂದು ವರ್ತಮಾನ ಬಂದಿದೆ ; ಅದು ನಿಜವೇ ?

ಡಾ॥ ಆರ್. ನಾಗನಗೌಡ.—1955-56ನೆಯ ಮೊದಲಿಗೆ ಐದು ಆಗಿವೆ.

ಶ್ರೀ ಟಿ. ಸಿ. ಬಸಪ್ಪ.—ತಾವು ಉತ್ತರದಲ್ಲಿ, (ಡಿ) ಯಲ್ಲಿ "The suggestion will be considered when allotting the additional N.E.S. Blocks" ಎಂದು ಹೇಳಿದ್ದೀರಿ. ಐದು ಅಪ್ಲಿಕೇಷನ್‌ಗಳಲ್ಲಿ ತರೀಕೆರೆಯೂ ಒಂದಾಗಿದೆ. ಅದನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈಗ ಐದು ಬಂದ್ದದರಲ್ಲಿ—ಇಪ್ಪತ್ತು ದಿವನವೂ ಒಂದೊಂದು ,ಡಿಸ್ಟ್ರಿಕ್ಟ್‌ಗೆ ಒಂದು ಬ್ಲಾಕು ಇತ್ತು ; ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಎರಡಿದ್ದವು. ಡಿಸ್ಟ್ರಿಕ್ಟ್‌ಗೆ ಒಂದೊಂದರಂತೆ ಇದ್ದ ಮೈನೂರು, ಮಂಡ್ಯ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್‌ಗೆ ಕೊಟ್ಟಿದ್ದೇವೆ. ಇನ್ನೊಂದನ್ನು ಕೇಂದ್ರ ಸರ್ಕಾರದ ಆಡಳಿತ ವರ್ಗದವರು ಮೊದಲೇ ತುಂಗಭದ್ರಾ ಪ್ರಾಜೆಕ್ಟ್ ಕೆಳಗಿನ ನಿರಾವರಿ ಪ್ರದೇಶದಲ್ಲಿ ಕೊಡಬೇಕೆಂದು ನಿರ್ಣಯಮಾಡಿದ್ದಾರೆ. ಉಳಿದ ಇನ್ನೊಂದನ್ನು ಶಿವಮೊಗ್ಗ ಡಿಸ್ಟ್ರಿಕ್ಟ್‌ಗೆ ಎರಡು ವರ್ಷಗಳಿಂದ ಒಂದನ್ನೂ ಕೊಟ್ಟಿರಲಿಲ್ಲವಾದ್ದರಿಂದ ಕೊಟ್ಟಿದ್ದೇವೆ.

Sri T. C. BASAPPA.—Is there any possibility of having additional blocks this year, Sir ?

Dr. R. NAGAN GOWDA.—We may have some Blocks in July and also again in October.

Sri T. C. BASAPPA.—Will the Government be pleased to consider the Tarikere Taluk when the new additional blocks are sanctioned ?

Dr. R. NAGAN GOWDA.—That has been answered.

Mr. SPEAKER.—The suggestion will be considered when allotting additional N. E. S. Blocks.

Sri A. V. NARASIMHA REDDY.—Is there any difficulty in getting the National Extension Service Blocks sanctioned from the Government of India ?

Dr. R. NAGAN GOWDA.—The Government of India have got a policy and they allot certain number of Blocks to each one of the State. When they allot the Blocks to Mysore, we will distribute them among the districts.

Sri A. V. NARASIMHA REDDY.—Is it not the policy of the Government of India to see that all the States are covered by these blocks by the end of Second Five-Year Plan, Sir ?

Dr. R. NAGAN GOWDA.—That is true; it is on that principle we have been allotting Blocks.

Sri A. V. NARASIMHA REDDY.—How many taluks are now covered in the State of Mysore under the scheme, Sir?

Sri R. NAGAN GOWDA.—We have now 14 Blocks.

Sri A. V. NARASIMHA REDDY.—May I know the areas which remain to be covered, Sir?

Dr. R. NAGAN GOWDA.—Their policy is, at the end of the First Five-Year Plan period they want to cover about 1/5th of the area. Afterwards they want to accelerate the allotment of these N. E. S. Blocks.

Sri A. V. NARASIMHA REDDY.—Is it 1/5th or $\frac{1}{3}$rd area that they intend to cover during the First Five-Year Plan, Sir?

Mr. SPEAKER.—The answer is given. They want to cover the area by the end of Second Five-Year Plan.

Sri A. V. NARASIMHA REDDY.—If they want to keep up the programme, at this rate would it be possible for the Government to cover the areas, Sir?

Mr. SPEAKER.—Government have stated that it was not possible to accelerate the programme.

Sri A. V. NARASIMHA REDDY.—When one of the important members of the Planning Commission visited the State recently, during my talk with him, he stated that they were prepared to sanction as many blocks as the Government of Mysore wanted. Now the Government of Mysore is expressing that there is some difficulty in getting these blocks sanctioned. I want to know the exact position, Sir?

Dr. R. NAGAN GOWDA.—The position as stated by the Hon'ble Member, I do not believe, is correct. They have been assigning blocks and we have been distributing.

Sri A. V. NARASIMHA REDDY.—When one of the Officers connected with the Planning Department had come, the representative of the Government of Mysore was also present. He stated that the Mysore had asked for only 5 blocks for 1955-56, is that position correct, Sir?

Dr. R. NAGAN GOWDA.—I do not have that information, Sir.

Sri A. V. NARASIMHA REDDY.—Will the Government kindly verify as to what that officer has stated and kindly let this House know about it?

Mr. SPEAKER.—The information given by that particular officer cannot be taken as a fact.

Sri Kadidal MANJAPPA.—It is not correct to say that the Government of India is prepared to sanction any number of N.E.S. Blocks. They sanction these blocks on the population basis to all the States and according to their scheme. What the Hon'ble Member says is not correct. I had a discussion with Sri T. T. Krishnamachari on this subject. With great difficulty, last year or year before last, we could secure two additional blocks.

Sri A. V. NARASIMHA REDDY.—I had a talk with Sri S. V. Rama Murthy some weeks back. It is he who disclosed this matter. Will the Government of Mysore verify regarding this matter and enlighten this House?

Dr. R. NAGAN GOWDA.—On October 1st we had expected that we would get one block for each district; on the other hand we got only 7 blocks. We had considerable difficulty in satisfying the members from Bangalore District, Mandya District and Mysore District who were denied the privilege.

ಶ್ರೀ ಟಿ. ಹನುಮಯ್ಯ.—ಕೇಂದ್ರ ಸರ್ಕಾರದವರು ಒಂದು ಪಾಲಸಿ ಪ್ರಕಾರ sanction ಮಾಡುತ್ತಾರೆಂದು ಹೇಳಿದಿರಿ, ಯಾವ ಪಾಲಸಿ ಪ್ರಕಾರ ಮಾಡುತ್ತಾರೆ?

ಡಾ॥ ಆರ್. ನಾಗನಗೌಡ.—ಒಂದೊಂದು ಸಂಸ್ಥಾನಕ್ಕೆ ಎಷ್ಟೆಷ್ಟು ಕೊಡಬೇಕೆಂದು policy ಇಟ್ಟುಕೊಂಡಿದ್ದಾರೆ. ಅದರಂತೆ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಸ್ಥಳಗಳನ್ನು ಸ್ಯಾಂಕ್ಷನ್ ಮಾಡುವವರು ನೀವೇ ಅಥವಾ ಕೇಂದ್ರ ಸರ್ಕಾರದವರೇ?

ಶ್ರೀ ಕಡಿದಾಳ್ ಮಂಜಪ್ಪ.—ಸಂಸ್ಥಾನಕ್ಕೆ ಸ್ಯಾಂಕ್ಷನ್ ಮಾಡಿದನಂತರ ನಾವು ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಅಗ್ರಿಕಲ್ಚರಲ್ ಇಲಾಖೆಯವರು ಯಾವ ಯಾವ ಸ್ಥಳಕ್ಕೆ ಶಿಫಾರಸು ಮಾಡುತ್ತಾರೋ ಅವುಗಳನ್ನು ಬಿಟ್ಟು ತಮಗೆ ಬೇಕಾದ್ದನ್ನೆಲ್ಲಾ ಸರ್ಕಾರದವರು ಸ್ಯಾಂಕ್ಷನ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಎಲ್ಲಾ ಶಿಫಾರಸುಗಳನ್ನೂ ಪರಿಶೀಲನೆ ಮಾಡಿ ಸ್ಥಳಗಳನ್ನು ನಿರ್ಣಯ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಡಿಪಾರ್ಟ್‌ಮೆಂಟಿನವರು recommend ಮಾಡಿದ್ದನ್ನು ಒಪ್ಪುತ್ತೀರಾ ಅಥವಾ ಸರ್ಕಾರದವರೇ ನೇರವಾಗಿ ತಮಗೆ ಬೇಕಾದ್ದನ್ನು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಎಲ್ಲಾ departmental recommendations ಗಳನ್ನೂ ತರಿಸಿಕೊಂಡು ಪರಿಶೀಲನೆಮಾಡಿ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸ್ಥಳದಲ್ಲಿ ಯಾವ ಯಾವ ಅನ ಕೂಲತೆಗಳಿದ್ದರೆ ಬ್ಲಾಕ್ ಕೊಡಬೇಕೆಂದು ಸೆಂಟ್ರಲ್ ಪ್ಲಾನಿಂಗ್ ಕಮೀಷನರಾಗಲಿ ಕೇಂದ್ರ ಸರ್ಕಾರದವರಾಗಲಿ ನಿಗದಿ ಮಾಡಿದ್ದಾರೆ? ಎಂಥ ಸ್ಥಳದಲ್ಲಿ ಕೊಡಬೇಕೆಂದು instructions ಕೊಟ್ಟಿದ್ದಾರೆ?

ಅಧ್ಯಕ್ಷರು.—ಹಿಂದೆ ಅದನ್ನೆಲ್ಲ ಹೇಳಿದ್ದಾರೆ.

Dr. R. NAGAN GOWDA.—They have given general instructions. ಈಗ ಏಪ್ರಿಲ್ ಒಂದರಲ್ಲಿ ಕೊಟ್ಟಿದ್ದರಲ್ಲಿ ಒಂದನ್ನು ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶದಲ್ಲಿ ಕೊಡಬೇಕೆಂದು ನಿರ್ಣಯ ಮಾಡಿದ್ದಾರೆ. ಮಿಕ್ಕವುಗಳ ವಿಷಯದಲ್ಲಿ general ಆಗಿ ಸೂಚನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—General instructions ಗೆ ವಿರುದ್ಧವಾಗಿ ಬ್ಲಾಕುಗಳನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಸಾಧಾರಣವಾಗಿ ನೀರು ವನತಿ ಎಲ್ಲದೆಯೋ ಅಲ್ಲಿಗೆ first preference ಕೊಡಬೇಕೆಂದಿರುವುದನ್ನು ಬಿಟ್ಟು ಬೇರೆಕಡೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಹಾಗೇನೂ ಇಲ್ಲ.

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯೂರು ತಾಲ್ಲೂಕಿಗೆ first preference ಕೊಡಬೇಕೆಂದಿದ್ದರೂ ಬೇರೆ ಕೊಟ್ಟಿದ್ದೀರಲ್ಲವೇ?

ಡಾ॥ ಆರ್. ನಾಗನಗೌಡ.—ಹಿರಿಯೂರು ತಾಲ್ಲೂಕಿಗೂ, in course of time ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ನಂಸ್ಥಾನವನ್ನೆಲ್ಲಾ ಬ್ಲಾಕ್ ಆಗಿ ವಿಂಗಡಿಸಿ ಮುಂದಿನ ವರ್ಷಗಳಲ್ಲಿ ಇಷ್ಟಿಷ್ಟು N.E.S. ಬ್ಲಾಕ್‌ಗಳನ್ನು ಇಂಥಿಂಥಕಡೆ ಕೊಡಬೇಕೆಂದು ಪ್ರೋಗ್ರಾಂ ಹಾಕಿದ್ದೀರಾ?

ಡಾ॥ ಆರ್. ನಾಗನಗೌಡ.—ಇಲ್ಲ, ಹಾಗೇನೂ ಇಲ್ಲ. ಅಲ್ಲದೆ, ಇಂಡಿಯಾ ಸರ್ಕಾರದವರು ಎಷ್ಟು ಬ್ಲಾಕುಗಳನ್ನು ಕೊಡುತ್ತಾರೆಂಬುದೂ ಗೊತ್ತಿಲ್ಲ. ಹೋದವರ್ಷ ಅಕ್ಟೋಬರಿನಲ್ಲಿ ನಮಗೆ ಒಂದು ಕೊಟ್ಟರು, ಈ ವರ್ಷ ಏಪ್ರಿಲ್‌ನಲ್ಲಿ ಕೊಟ್ಟಿದ್ದಾರೆ. ನಮಗೀಗ ಬಂದಿರುವ information ಮೇರೆಗೆ ಜುಲೈನಲ್ಲಿ ಕೆಲವು, ಅಕ್ಟೋಬರಿನಲ್ಲಿ ಕೆಲವು ಕೊಡುವಂತೆ ಗೊತ್ತಾಗಿದೆ. ಖಚಿತವಾಗಿ ಎಷ್ಟು ಕೊಡುತ್ತಾರೋ ಗೊತ್ತಿಲ್ಲ. ಖಚಿತವಾಗಿ ಎಷ್ಟು ಕೊಡುತ್ತಾರೆಂಬುದು ನಿರ್ಣಯವಾದರೆ distribute ಮಾಡುವುದನ್ನು ಯೋಚನೆ ಮಾಡಬಹುದು.

ಶ್ರೀ ಬಿ. ಹುಚ್ಚೇಗೌಡ.—ಈಗ ಪ್ರೋಗ್ರಾಂ ಹಾಕಿಕಳುಹಿಸಬೇಕೆಂದು instruction ಏನಾದರೂ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಬಂದಿಲ್ಲ.

12-30 P.M.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಎರಡನೆಯ ಬ್ಲಾಕನ್ನು ಮಾಡುವಾಗ ಆಯಾ ಪ್ರದೇಶದಲ್ಲಿರುವ ಎಲ್. ಎ. ಮೆಂಬರುಗಳ ಪ್ರಭಾವಕ್ಕೆ ಅನುಸಾರವಾಗಿ ತಾವು ಈ ಬ್ಲಾಕುಗಳನ್ನು ಮಾಡಿದ್ದೀರಲ್ಲವೇ?

ಡಾ॥ ಆರ್. ನಾಗನಗೌಡ.—ಹಾಗೇನೂ ಮಾಡಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲವುಕಡೆ ನೀರಿನ ಸರಬರಾಯಿ ಚೆನ್ನಾಗಿಲ್ಲದಿದ್ದರೂ ಅಲ್ಲಿಗೆ N.E.S. ಬ್ಲಾಕುಗಳನ್ನು ಕೊಟ್ಟು ನೀರಿನ ವ್ಯವಸ್ಥೆ ಇರುವ ಜಾಗಕ್ಕೆ ಏಕೆ ಕೊಡಲಿಲ್ಲ?

ಡಾ॥ ಆರ್. ನಾಗನಗೌಡ.—ಅಲ್ಲಿ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲದುದರಿಂದಲೇ ಅನುಕೂಲವಾಗಲಿ ಎಂದು ಕೊಟ್ಟಿದ್ದೇವೆ. ಹೆಚ್ಚಿಗೆ ಅನುಕೂಲವಿರುವ ಕಡೆಗೂ ಅನಂತರ ಕೊಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಈಗ ಈ 12 ಬ್ಲಾಕುಗಳಲ್ಲಿ ಮಾನ್ಯ ಮಂತ್ರಿಗಳಿಗೆ ಸಂಬಂಧಪಟ್ಟಂಥ ಕಾನ್ಸ್ಟಿಟ್ಯುಯೆನ್ಸಿಯೊಳಗೆ ಎಷ್ಟಿರುತ್ತವೆ ಎನ್ನುವುದನ್ನು ತಿಳಿಸುತ್ತೀರಾ?

ಡಾ॥ ಆರ್. ನಾಗನಗೌಡ.—ಎಲ್ಲೋ ಆಕಸ್ಮಿಕವಾಗಿ ಒಂದೆರಡು ಹಾಗಾಗಿದೆ. ಅಷ್ಟೇ ಹೊರತು ಅವರಿಗಾಗಿ ಏನೂ ಹಾಗೆ ಮಾಡಲಿಲ್ಲ.

ಶ್ರೀ ವಿ. ಆರ್. ನಾಯ್ಡು.—ಈಗ ಬೆಂಗಳೂರಿನಲ್ಲಲ್ಲೆಲ್ಲೇ ಸ್ಲಂಪ್ ಏರಿಯಾ ಜಾಸ್ತಿಯಾಗಿದೆ. ಅಲ್ಲಿಗೂ ಕೂಡ ಈ ಬ್ಲಾಕುಗಳನ್ನು ಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಈ ಯೋಜನೆ ಅದಕ್ಕೆ ಅನ್ವಯಿಸುವುದಿಲ್ಲ; ಅದುದರಿಂದ ಬೆಂಗಳೂರಿಗೆ ಕೊಡುವುದಕ್ಕಾಗುವುದಿಲ್ಲ.

---

## Kabbal Hill, Kanakapura Taluk (Provision of facilities like rest house, well, etc.)

*Q.*—694. Sri S. KARIAPPA (Virupakshapura).—

Will the Government be pleased to state:—

(*a*) whether there is a long standing representation for the creation of facilities, namely, a well fitted with electric pump, a rest house and railings to the hill at Kabbal, Kanakapura Taluk;

(*b*) the steps taken by them?

*A.*—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of reply to (*a*).

ಶ್ರೀ ಎಸ್. ಕರಿಯಪ್ಪ.—ಈ ಕಬ್ಬಾಳದ ದೇವಸ್ಥಾನ ಎನ್ನುವುದು ಒಂದು ಮೇಜರ್ ಮುಜ್ರಾಯಿ ದೇವಸ್ಥಾನ ಅಲ್ಲವೇ?

Sri Kadidal MANJAPPA.—Notice. I am not aware of it. All the same, I have instructed the concerned authorities to prepare an estimate. The